


# ‘ಮೊದಲು ನಕ್ಕುಬಿಡಿ, ಆಮೇಲೆ ಯೋಚಿಸಿ...

**ಚಿತ್ರವಿಚಿತ್ರ ವೈಜ್ಞಾನಿಕ ಅನ್ವೇಷಣೆಗಳಿಗೆ ‘ಆನಲ್ಸ್ ಆಫ್ ಇಂಪ್ರಾಬಬಲ್ ರೀಸರ್ಚ್' ಸಂಸ್ಥೆ ‘ಇಗ್ನೊಬೆಲ್ ಪ್ರಶಸ್ತಿ’ ನೀಡುತ್ತದೆ. ಇಲ್ಲಿದೆ, 2021ರ ಪುರಸ್ಕೃತ ಸಂಶೋಧನೆಗಳ ವಾರೆನೋಟ.**

■ **ಸರೋಜಾ ಪ್ರಕಾಶ**



ಇಗ್ನೊಬೆಲ್ ಪ್ರಶಸ್ತಿಗಳ ಸಂಸ್ಥಾಪಕ ಮಾರ್ಕ್ ಅಬ್ರಹಾಂಸ್

**ಒದುವ ಮೊದಲೊಮ್ಮೆ ನಕ್ಕು ಬಿಡಿ!**

- ಬೆಕ್ಕುಗಳು ಒಂದಲ್ಲ, ಎರಡಲ್ಲ – ಹದಿಮೂರು ರೀತಿಯ ಸ್ವರ ಹೊರಡಿಸಿ ಮಾನವರನ್ನು ಸಂಪರ್ಕಿಸುತ್ತವೆ ಎಂಬ ಶೋಧಕ್ಕೆ ಸ್ವೀಡನ್‌ನ ಸುಸೇನ್ ಅವರ ತಂಡಕ್ಕೆ ಜೀವವಿಜ್ಞಾನ ಪ್ರಶಸ್ತಿ.
- ಜನರು ತಿಂದು ಉಗುಳುವ ಚ್ಯೂಯಿಂಗ್ ಗಮ್ ಅವಶೇಷದಲ್ಲಿ ಮೂರು ತಿಂಗಳವರೆಗೆ ಉಗುಳಿನ ಬ್ಯಾಕ್ಟೀರಿಯಾ ನೆಲೆಯಾಗಿರುತ್ತದೆ ಎಂದು ಸಂಶೋಧಿಸಿದ ತಂಡಕ್ಕೆ ಪರಿಸರವಿಜ್ಞಾನ ಪ್ರಶಸ್ತಿ.
- ಸಿನಿಮಾ ಥಿಯೇಟರ್‌ಗಳಲ್ಲಿ ಜನರು ಹೊರಹಾಕುವ ಉಸಿರಿನಿಂದ ಅವರು ನೋಡಿದ ಸಿನಿಮಾದಲ್ಲಿ ಇದ್ದಿರಬಹುದಾದ ಹಿಂಸೆ, ಬೈಗುಳ, ಕೆಟ್ಟಭಾಷೆ ಇತ್ಯಾದಿಗಳನ್ನು ಪತ್ತೆ ಹಚ್ಚಬಹುದು ಎಂಬ ಅಧ್ಯಯನಕ್ಕೆ ರಸಾಯನವಿಜ್ಞಾನ ಪ್ರಶಸ್ತಿ.
- ಪಾದಚಾರಿಗಳು ತಮ್ಮದೇ ಒಂದು ವಿಶಿಷ್ಟ ಚಲನೆಯ ಮೂಲಕ ರಸ್ತೆಯಲ್ಲಿ ಒಬ್ಬರಿಗೊಬ್ಬರು ಡಿಕ್ಕಿ ಹೊಡೆಯದೆ ಮುಂದೆ ಸಾಗುತ್ತಿರುತ್ತಾರೆ ಎಂಬ ಶೋಧಕ್ಕೆ ಭೌತವಿಜ್ಞಾನ ಪ್ರಶಸ್ತಿ.
- ಪಾದಚಾರಿಗಳಲ್ಲಿ ಹೆಚ್ಚಿನವರು ಸರಿಯಾಗಿ ನಡೆಯುತ್ತಿದ್ದರೂ ಕೆಲವೇ ಕೆಲವು ಅನ್ಯಮನಸ್ಕರಿಂದಾಗಿ ಡಿಕ್ಕಿ, ಘರ್ಷಣೆಗಳು ನಡೆಯುತ್ತವೆ ಎನ್ನುವ ಅಂಕಿ–ಅಂಶ ಒಳಗೊಂಡ ಅಧ್ಯಯನಕ್ಕೆ ಚಲನವಿಜ್ಞಾನ ಪ್ರಶಸ್ತಿ.
- ಸೈನಸ್‌ನಿಂದ ಕಟ್ಟಿದ ಮೂಗನ್ನು ಲೈಂಗಿಕ ಕ್ರಿಯೆಯ ಮೂಲಕ ಔಷಧ ಸೇವನೆಯ ಪರಿಣಾಮ ಉಂಟುಮಾಡುವಷ್ಟೇ ಸರಾಗಗೊಳಿಸಲು ಸಾಧ್ಯ ಎಂದು ಶೋಧಿಸಿದ ತಜ್ಞರ ತಂಡಕ್ಕೆ ಔಷಧವಿಜ್ಞಾನ ಪ್ರಶಸ್ತಿ.
- ಜಲಾಂತರ್ಗಾಮಿ ನೌಕೆಗಳಲ್ಲಿ ವಿಶೇಷವಾದ ಕೀಟನಾಶಕ ಬಳಸಿ ಜಿರಲೆಗಳಿಂದ ಮುಕ್ತಿ ಪಡೆಯಬಹುದು ಎಂಬ ಅಮೆರಿಕದ ನೌಕಾವಿಭಾಗದ ತಜ್ಞರ ಸಂಶೋಧನೆಗೆ ಕೀಟವಿಜ್ಞಾನ ಪ್ರಶಸ್ತಿ.

ಇಗ್ನೊಬೆಲ್
ಪ್ರಶಸ್ತಿ ಸಂಭ್ರಮ
2021

- ಪುರುಷರು ಬೇರೆಯವರಿಂದ ಗುದ್ದು ತಿನ್ನುವಾಗ ದಪ್ಪ ಗಡ್ಡ ಬಿಟ್ಟಿದ್ದರೆ ದವಡೆಯ ಮೂಳೆಯನ್ನು ರಕ್ಷಿಸಿಕೊಳ್ಳಬಹುದು ಎಂಬ ಪ್ರತಿಪಾದನೆಗೆ ಶಾಂತಿ ಪ್ರಶಸ್ತಿ.
- ದೇಶದ ರಾಜಕಾರಣಿಗಳ ಬೊಜ್ಜು ಆ ದೇಶದ ಭ್ರಷ್ಟಾಚಾರದ ಮಾನದಂಡ ಆಗಬಹುದು ಎಂಬ ವಾದಕ್ಕೆ ಇಕನಾಮಿಕ್ಸ್ ಪ್ರಶಸ್ತಿ.
- ಘೇಂಡಾಮೃಗಗಳನ್ನು ಒಂದೆಡೆಯಿಂದ ಇನ್ನೊಂದೆಡೆ ಸಾಗಿಸುವಾಗ ಅಡ್ಡ ಸ್ಟ್ರೆಚರ್‌ನಲ್ಲಿ ಮಲಗಿಸುವುದಕ್ಕಿಂತ ಹೆಲಿಕಾಪ್ಟರಿನಲ್ಲಿ ಜೋತಾಡಿಸುವುದು ಅವುಗಳ ಆರೋಗ್ಯಕ್ಕೆ ಒಳ್ಳೆಯದು ಎಂಬ ಶೋಧಕ್ಕೆ ಸಾರಿಗೆ ಪ್ರಶಸ್ತಿ.